ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 74/2016
(ಫ್ರಾಸಾ-4 ಚಾಸಾ-5 )
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ದಿಃ 07.03.2023

| | | |
|---|---|---|
| ಸಾಕ್ಷಿದಾರರ ಹೆಸರು | - | ವೆಂಕಟರಮಣಪ್ಪ |
| ತಂದೆಯ ಹೆಸರು | - | ಚಿಕ್ಕ ತಿಪ್ಪಯ್ಯ |
| ವಯಸ್ಸು | - | 40 ವರ್ಷ, |
| ಉದ್ಯೋಗ | - | ಕೂಲಿ ಕೆಲಸ |
| ವಾಸ | - | ಕಾಡಅಗ್ರಹಾರ, ಬಿದರಹಳ್ಳಿ ಹೋಬಳಿ |

ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿ ಈತನ ಪರಿಚಯ ಇದೆ. ಈಗ ತೋರಿಸಲಾದ ದಾಖಲೆ ಮೇಲೆ ನನ್ನ ಸಹಿ ಇದೆ. ಸಾಕ್ಷಿದಾರರಿಗೆ ತೋರಿಸಿದ ದಾಖಲೆ ಸಂಚು ಮಾಡಿದ ಸ್ಥಳದ ಮಹಜರ್ ಇದ್ದು ಅದನ್ನು ನಿಪಿ-5 ಎಂದು ಮತ್ತು ಅದರಲ್ಲಿರುವ ಸಾಕ್ಷಿದಾರರ ಸಹಿಯನ್ನು ನಿಪಿ-5(ಎ) ಎಂದು ಗುರ್ತಿಸಲಾಯಿತು. ನಿಪಿ-5 ಕ್ಕೆ ಕಾಡಅಗ್ರಹಾರದಲ್ಲಿ ಈಗ ಸುಮಾರು 7 ವರ್ಷಗಳ ಹಿಂದೆ ಸಹಿ ಮಾಡಿದ್ದೇನೆ. ಒಂದು ದಿವಸ ಮಧ್ಯಾಹ್ನ ಊಟಕ್ಕೆ ನಾನು ಊರಿಗೆ ಬಂದಿದ್ದೆ. ಆಗ ಪೋಲಿಸರು 1 ನೇ ಆರೋಪಿಯ ಮನೆಯ ಹತ್ತಿರ ಇದ್ದರು. ಆಗ ನಿಪಿ-5 ಕ್ಕೆ ನನ್ನ ಸಹಿ ಪಡೆದಿದ್ದಾರೆ. ಆಗ 1 ನೇ ಆರೋಪಿ ಸಹ ಇದ್ದರು. ಆ ಮನೆಯಲ್ಲಿ 1 ನೇ ಆರೋಪಿ, ಆತನ ಹೆಂಡತಿ ಮತ್ತು 1 ನೇ ಆರೋಪಿಯ ಅಣ್ಣ ವಾಸಿಸುತ್ತಿದ್ದರು. ಈಗ ತೋರಿಸಲಾದ ಫೋಟೋಗಳು 1 ನೇ ಆರೋಪಿಯ ಮನೆಯದ್ದು ಇವೆ. ಸದರಿ ಎರಡು ಫೋಟೋಗಳನ್ನು ಒಟ್ಟಾಗಿ ನಿಪಿ-6 ಎಂದು ಗುರ್ತಿಸಲಾಯಿತು. ನಿಪಿ-5 ಕ್ಕೆ ನನ್ನೊಂದಿಗೆ ಚಾಸಾ-6 ಸಹ ಸಹಿ ಮಾಡಿದ್ದಾರೆ. ಅಲ್ಲಿ ಬಹಳ ಜನ ಸೇರಿದ್ದರು. ಪೋಲಿಸರು ಏಕೆ ಬಂದಿದ್ದರೆಂದು ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಎಸ್‌ಪಿಪಿ ರವರು ವಿನಂತಿಸಿದ್ದರಿಂದ ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

2. 1 ನೇ ಆರೋಪಿಯು ಮೃತನನ್ನು ಕೊಲೆ ಮಾಡಲು ಸಂಚು ರೂಪಿಸಿದ ಸ್ಥಳ ಎಂದು ಮನೆಯ ಒಳಗಿನ ಹಾಲ್ ರೂಮನ್ನು ತೋರಿಸಿದ ಎಂದರೆ ಸರಿಯಲ್ಲ. ಆಗ ಪೋಲಿಸರು ನಿಪಿ-5 ರಂತೆ ಮಹಜರ್ ಮಾಡಿದ್ದಾರೆ ಎಂದರೆ ಸರಿಯಲ್ಲ. ನಿಪಿ-5 ನ್ನು ತಿಳಿದುಕೊಂಡು ಅದಕ್ಕೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಈಗ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿತರ ಪರ ವಕೀಲರು ಗೈರು ಹಾಜರು. ಅವರನ್ನು ಕರೆಸುವಂತೆ ಆರೋಪಿತರಿಗೆ ತಿಳಿಸಿ ಪಾಟೀ ಸವಾಲನ್ನು ಮಧ್ಯಾಹ್ನಕ್ಕೆ ಮುಂದೂಡಲಾಯಿತು.

(ಸಾಕ್ಷಿ ಹೇಳಿದಂತೆ ಹೇಳಿಕೆಯನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ವಿ. ಎಂ. ಆನಂದಶೆಟ್ಟಿ)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸಾಕ್ಷಿಯನ್ನು ಮಧ್ಯಾಹ್ನ ಪುನಃ ಕರೆಸಿ ಪ್ರಮಾಣ ವಚನ ಭೋದಿಸಲಾಯಿತು

**ಪಾಟೀ ಸವಾಲುಃ** ಆರೋಪಿತರ ಪರ ವಕೀಲರು ಗೈರು ಹಾಜರು. ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ಸಾಕ್ಷಿ ಹೇಳಿದಂತೆ ಹೇಳಿಕೆಯನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)
ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ವಿ. ಎಂ. ಆನಂದಶೆಟ್ಟಿ)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು